

# ಆಹಾ ಸುದ್ದಿ!

★ ಸಸಿತೋಟ

ನ್ಯೂ ಮೆಕ್ಸಿಕೋದ ಅಲ್ಬುಕರ್ಕ್‌ನಲ್ಲಿ ಕಳ್ಳನೊಬ್ಬ ಮನೆಯೊಂದರಲ್ಲಿ ಇಟ್ಟಿದ್ದ 2.5 ಲಕ್ಷ ಡಾಲರ್ ಮೌಲ್ಯದ ಚಿನ್ನಾಭರಣ ದರೋಡೆ ಮಾಡಿದನಂತೆ. ಅಷ್ಟಕ್ಕೆ ಸುಮ್ಮನಿರದೇ ಶೌಚಾಲಯಕ್ಕೆ ತೆರಳಿ ಮಲ ವಿಸರ್ಜನೆ ಮಾಡಿ ನೀರು ಹಾಕದೇ ಹೋದನಂತೆ. ಪೊಲೀಸರಿಗೆ ಅಷ್ಟು ಸಾಕಾಯಿತು, ಡಿಎನ್‌ಎ ಪರೀಕ್ಷೆಯಲ್ಲಿ ಕಳ್ಳನನ್ನು ಹಿಡಿದು ಹಾಕಿದರು. ಯಾರದ್ದೋ ಮನೆಯಿಂದ ಏನನ್ನಾದರೂ ತೆಗೆದುಕೊಂಡರೆ, ನಾವೂ ಏನನ್ನಾದರೂ ಅಲ್ಲಿಯೇ ಬಿಟ್ಟು ಬರಬೇಕೆಂಬ ತತ್ವವನ್ನು ಕಳ್ಳ ಪಾಲಿಸಲು ಹೋಗಬಾರದಿತ್ತು.

ಬೆಕ್ಕುಗಳಿಗಾಗಿಯೇ ಜಗತ್ತಿನಲ್ಲಿ ಮೊದಲ ಬಾರಿಗೆ ಕೀಬೋರ್ಡ್ ಸಂಗೀತ ಸಾಧನ ತಯಾರಿಸಲಾಗಿದೆ. ಎಂಜಿನಿಯರ್‌ಗಳು, ವಿಜ್ಞಾನಿಗಳು, ಪಶುವೈದ್ಯರು ಸೇರಿ ತಯಾರಿಸಿದ ಈ ಕೀ ಬೋರ್ಡ್‌ನಿಂದ ಏರ್ಪಡಿಸಿದ್ದ ಸಂಗೀತ ಸಂಜೆಯ ಶ್ರೋತೃಗಳು ಕೂಡಾ ಬೆಕ್ಕುಗಳೇ. ಈ ಸಂಗೀತ ನಮಗೆ ಕೇಳದ ಅಲ್ಟ್ರಾಸೋನಿಕ್ ತರಂಗಗಳಿಂದ ಹೊರಹೊಮ್ಮುವುದಂತೆ. ಇಲ್ಲಿಯವರೆಗೆ 'ಪುಸ್ಸಿಕ್ಯಾಟ್.. ಪುಸ್ಸಿಕ್ಯಾಟ್..' ಎಂಬ ಹಾಡು ಕೇಳಿ ಕೇಳಿ ಬೆಕ್ಕುಗಳಿಗೆ ಬೋರಾಗಿರಬಹುದು.



ಚೀನಾದ ವಧು- ವರರು ಸೀದಾ ಶಿಖರವನ್ನೇರುತ್ತ ಫೋಟೊ ತೆಗೆಸಿಕೊಂಡರು. ಈ ಸಾಹಸದಲ್ಲಿ ಮಧುಚಂದ್ರದ ಸಂತಸದ ಬದಲು ಮೇಲಿನ ಲೋಕಕ್ಕೆ ಹೋಗುವ ಸಾಧ್ಯತೆಯೇ ಹೆಚ್ಚು. ಫೋಟೊ ತೆಗೆಸಿಕೊಳ್ಳುವ ಖಯಾಲಿ ಇಷ್ಟು ವಿಪರೀತಕ್ಕೆ ಹೋಗಬಾರದಿತ್ತು.

ಬ್ರಿಟನ್ನಿನ ಡೆವಾನ್‌ನಲ್ಲಿರುವ ಹೋಪ್ ಆಫ್ ಕೋವ್‌ನಲ್ಲಿ ನಿಸರ್ಗವೇ ರಚಿಸಿರುವ ವಯಸ್ಕನ ಮುಖವಿದು. ಗಾಳಿ ಮತ್ತು ಮಳೆ ಸೇರಿ ಬೆಟ್ಟಕ್ಕೆ ಬಾಯಿ, ಮೂಗು, ಕಣ್ಣು ಮತ್ತು ಕಿವಿಯನ್ನು ನೀಟಾಗಿ ತಿದ್ದಿವೆ. ನಮ್ಮಲ್ಲಾಗಿದ್ದರೆ ಬ್ರಹ್ಮ ಬರೆದ ಮುಖವಿದು ಎಂದು ದೇವಲೋಕದ ಬಣ್ಣ- ಸುಣ್ಣ ಸೇರಿಕೊಳ್ಳುತ್ತಿತ್ತು.



ಜೇಮ್ಸ್ ಬಾಂಡ್ ಚಿತ್ರ 'ದಿ ಸ್ಪೈ ಹೂ ಲವ್ಡ್ ಮಿ' ನೋಡಿದವರಿಗೆ ನೆನಪಿರಬಹುದು, ರಸ್ತೆಯ ಮೇಲೆ ಓಡುತ್ತಿದ್ದ ಕಾರು ನೀರಿಗೆ ಬಿದ್ದು ಸಬ್‌ಮರಿನ್ ತರಹ ವೇಗದಿಂದ ಧಾವಿಸುವ ದೃಶ್ಯ. ಈಗ 12 ಲಕ್ಷ ಪೌಂಡ್ (11,77,92,900 ರೂಪಾಯಿ) ವೆಚ್ಚದಲ್ಲಿ ಇಂತಹ ವಾಹನವನ್ನು ತಯಾರಿಸಲಾಗಿದ್ದು ಗಂಟೆಗೆ 75 ಮೈಲು ವೇಗದಲ್ಲಿ ನೀರಿನಾಳದಲ್ಲಿ ಈಜುತ್ತದಂತೆ. ಇಷ್ಟೊಂದು ದುಬಾರಿ ಕಾರನ್ನು ಖರೀದಿಸುವವರು ಭಾರದ ಪರ್ಸ್ ಇರುವ 'ತೇಲಿಸೊ ಇಲ್ಲ ಮುಳುಗಿಸೊ' ಎಂಬ ಖಯಾಲಿಯ ವ್ಯಕ್ತಿಗಳೇ ಇರಬಹುದು.

ಅಮೆರಿಕಾದ ಪೆನ್‌ಸಿಲ್ವೇನಿಯ ವಿಶ್ವವಿದ್ಯಾನಿಲಯದಲ್ಲಿ ಮುಂದಿನ ವರ್ಷ ಹೊಸ ಕೋರ್ಸ್ ಆರಂಭವಾಗಲಿದೆ. 'ಅಂತರ್ಜಾಲದಲ್ಲಿ ಸಮಯ ವ್ಯಯ ಮಾಡುವುದು ಹೇಗೆ?' ಎಂಬ ವಿಷಯವನ್ನು ಇಂಗ್ಲಿಷ್ ಮೇಜರ್ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದು. ಆರಾಮವಾಗಿ ಮೂರು ತಾಸು ಕಾಲ ಅಂತರ್ಜಾಲದಲ್ಲಿ ಈಜಾಡಿಕೊಂಡಿರಬೇಕಂತೆ. ಆದರೆ ಅಕ್ಕಪಕ್ಕದಲ್ಲಿ ಯಾರೂ ಇಲ್ಲದೇ ಫೋನ್ ಕೂಡಾ ಬಂದಾಗಿರಬೇಕಂತೆ. ಅಂತರ್ಜಾಲದ ಹುಚ್ಚು ಹಚ್ಚಿಕೊಂಡವರನ್ನು ನಿಜವಾಗಿಯೂ ಹುಚ್ಚರನ್ನಾಗಿ ಮಾಡುವ ಕೋರ್ಸ್ ಇರಬಹುದು.

